ವಿಶ್ವ ಬ್ಯಾಂಕ್/ಅಂತರ ರಾಷ್ಟ್ರೀಯ ಅಭಿವೃದ್ಧಿ ಏಜೆನ್ಸಿಗಳಿಂದ ಸಹಾಯ

೧೪೬. ಶ್ರೀ ಆರ್. ವೆಂಕಟರಾವಯ್ಯ (ಮಂಗಳಾಗಿಲು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಶ್ವ ಬ್ಯಾಂಕ್ ಮತ್ತು ಅಂತರ ರಾಷ್ಟ್ರೀಯ ಅಭಿವೃದ್ಧಿ ಏಜೆನ್ಸಿಗಳಿಂದ ಕರ್ನಾಟಕಕ್ಕೆ ಮಂಜೂರು ಮಾಡುವ ಸಾಲಗಳ ಮೇಲೆ ಹಾಕುವ ಬಡ್ಡಿಯ ದರವೆಷ್ಟು ?

ಆ) ಕೇಂದ್ರ ಸರ್ಕಾರವು ವಿಶ್ವ ಬ್ಯಾಂಕ್‌ನ ಸಾಲಗಳ ಮೇಲೆ ರಾಜ್ಯ ಸರ್ಕಾರಕ್ಕೆ ಹಾಕುವ ಬಡ್ಡಿಯ ದರವೆಷ್ಟು ?

ಇ) ವಿಶ್ವ ಬ್ಯಾಂಕಿನ ನೆರವಿನಿಂದ ನಿರ್ವಹಣೆ ಮಾಡುತ್ತಿರುವ ಯೋಜನೆಗಳು ಯಾವುವು ?

ಈ) ವಿಶ್ವ ಬ್ಯಾಂಕ್ ಮತ್ತು ಅಂತರ ರಾಷ್ಟ್ರೀಯ ಅಭಿವೃದ್ಧಿ ಏಜೆನಿ ಗಳ ಆರ್ಥಿಕ ನೆರವಿನಿಂದ ಕೈಗೊಳ್ಳಲು ಉದ್ದೇಶಿಸಿರುವ ಯೋಜನೆಗಳು ಯಾವುವು ?

ಶ್ರೀ ಡಾವಂಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ವಿಶ್ವ ಬ್ಯಾಂಕ್ ಮತ್ತು ಅಂತರ ರಾಷ್ಟ್ರೀಯ ಅಭಿವೃದ್ಧಿ ಏಜೆನ್ಸಿಗಳು ರಾಜ್ಯ ಸರ್ಕಾರಗಳಿಗೆ ಯಾವುದೇ ಸಾಲವನ್ನು ನೇರವಾಗಿ ಮಂಜೂರು ಮಾಡುವುದಿಲ್ಲ.

ಆ) ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ನೀಡುವ ಸಾಲಗಳಿಗೆ ರಾಜ್ಯ ಯೋಜನೆಗಳಿಗೆ ಅನ್ವಯಿಸುವ ಬಡ್ಡಿ ದರದಷ್ಟೇ ಆಗಿರುತ್ತದೆ. ಪ್ರಸ್ತುತ ಬಡ್ಡಿ ದರವು ಪ್ರತಿಶತ ೯$\frac{1}{4}$ ರಷ್ಟಿದೆ.

ಇ) ವಿಶ್ವ ಬ್ಯಾಂಕ್ ನೆರವಿನಿಂದ ಈಗಾಗಲೇ ಕೈಗೊಳ್ಳಲಾಗಿರುವ ಯೋಜನಾ ವಿವರಗಳನ್ನು ಅನುಬಂಧ–೧ ರಲ್ಲಿ ನೀಡಲಾಗಿದೆ.

ಈ) ವಿಶ್ವ ಬ್ಯಾಂಕ್ ಮತ್ತು ಅಂತರ ರಾಷ್ಟ್ರೀಯ ಅಭಿವೃದ್ಧಿ ಏಜೆನ್ಸಿಗಳ ನೆರವಿನಿಂದ ಕೈಗೊಳ್ಳಲು ಉದ್ದೇಶಿಸಿರುವ ಯೋಜನಾ ವಿವರಗಳನ್ನು ಅನುಬಂಧ–೨ ರಲ್ಲಿ ನೀಡಲಾಗಿದೆ.

ಅನುಬಂಧ—೧

ಕ್ರಮ ಸಂಖ್ಯೆ	ಯೋಜನೆಯ ಹೆಸರು
೧	೨
೧	ಬಹು ರಾಜ್ಯ ಗೋಡಂಬಿ ಯೋಜನೆ
೨	ಕರ್ನಾಟಕ ರೇಷ್ಮೆ ಯೋಜನೆ
೩	ಕರ್ನಾಟಕ ಕೆರೆ ನೀರಾವರಿ
೪	ಕರ್ನಾಟಕ ನೀರಾವರಿ ಯೋಜನೆ
೫	ಭಾರತೀಯ ಜನ ಸಂಖ್ಯಾ ಯೋಜನೆ–೩
೬	ಕಭಲ ಸಾಲ ವಾಟರ್ ಷೆಡ್ ಯೋಜನೆ
೭	ರಾಷ್ಟ್ರೀಯ ಕೃಷಿ ವಿಸ್ತರಣಾ ಯೋಜನೆ
೮	ರಾಷ್ಟ್ರೀಯ ಬೀಜನಗಳ ಯೋಜನೆ–೨ನೇ ಹಂತ
೯	ಕರ್ನಾಟಕ ಸಮಾಜ ಅರಣ್ಯ ಯೋಜನೆ
೧೦	ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ ಮಂರನೇ ಉಗ್ರಾಣ ಯೋಜನೆ.
೧೧	ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ಮೂರನೇ ಹತ್ತಿ ಮತ್ತು ಬೀಜ ಸುಧಾರಣಾ ಯೋಜನೆ.
೧೨	ವರಡನೇ ಹಂತದ ಕೊಳವೇ ಬಾವಿ ಯೋಜನೆಯ ಧನ ಸಹಾಯದಿಂದ ಜಲ ಸಂಪನ್ಮೂಲ ಅಭಿವೃದ್ಧಿ ವಿಭಾಗದಲ್ಲಿ ಯೋಜನಾ ಸಿದ್ಧತೆಗಳ ಕೋಶ.

ಅನುಬಂಧ—೨

ವಿಶ್ವ ಬ್ಯಾಂಕ್ ಮತ್ತು ಆಂತರ ರಾಷ್ಟ್ರೀಯ ಅಭಿವೃದ್ಧಿ ಏಜೆನ್ಸಿಗಳ ನೆರವಿನಿಂದ ಕೈಗೊಳ್ಳಲು ಉದ್ದೇಶಿಸಿರುವ ಯೋಜನೆಗಳು.

ಕ್ರಮ ಸಂಖ್ಯೆ	ಯೋಜನೆಗಳ ಹೆಸರು
೧	೨
೧	ಜಲಾಶಯ ಮೀನು ಅಭಿವೃದ್ಧಿ ಯೋಜನೆ.
೨	ಕರ್ನಾಟಕದ ಒಂಬತ್ತು ಜಿಲ್ಲೆಗಳಲ್ಲಿ ಕುರಿ ಅಭಿವೃದ್ಧಿ
೩	ಸುಸಂಘಟಿತ ತೋಟಗಾರಿಕೆ ಅಭಿವೃದ್ಧಿ
೪	ರಾಷ್ಟ್ರೀಯ ನೀರು ನಿರ್ವಹಣಾ ಯೋಜನೆ
೫	ಬೆಂಗಳೂರು ನಗರ ಸಾರಿಗೆ ಯೋಜನೆ
೬	ಕೃಷ್ಣ ನೀಲ್ದಂಡೆ ಯೋಜನೆ–ಒಂದನೇ ಘಟ್ಟ (ಉಳಿದ ಕಾಮಗಾರಿ)
೭	ಕೃಷ್ಣ ಮೇಲ್ದಂಡೆ ಯೋಜನೆ–ಎರಡನೇ ಹಂತ
೮	ಮಲಪ್ರಭ ಯೋಜನೆ (ಉಳಿದ ಕಾಮಗಾರಿ)
೯	ಘಟಪ್ರಭಾ ಯೋಜನೆ–ಮೂರನೇ ಹಂತ (ಉಳಿದ ಕಾಮಗಾರಿ)
೧೦	ಕೃಷ್ಣರಾಜಸಾಗರ ಕಾಲುವೆಯ ಆಧುನೀಕರಣ
೧೧	ಭದ್ರಾ ಯೋಜನೆಯ ಆಧುನೀಕರಣ
೧೨	ಕರ್ನಾಟಕ ರೇಷ್ಮೆ ಯೋಜನೆಯ ಎರಡನೇ ಹಂತ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮೈನರ್ ಇರಿಗೇಷನ್ ಮೆತ್ತಿತರ ಯೋಜನೆಗಳಿಗೆ ವರ್ಲ್ಡ್ ಬ್ಯಾಂಕ್‌ನವರು ಕೆಲವು ಲೋನ್‌ಗಳನ್ನು ಕೊಡುವಾಗ, ಕೇಂದ್ರಸರ್ಕಾರಕ್ಕೆ ಮುಕ್ಕಾಲು ಪರ್ಸೆಂಟ್ ಬಡ್ಡಿಯನ್ನು ಕೊಡಬೇಕೆಂದು ಆರ್ಡರುಗಳು ಇವೆ. ಇದನ್ನು ನಮಗೆ ಕೊಡುವಾಗ, ೮ ಪರ್ಸೆಂಟ್‌ಗೆ ಪೆಚ್ಚಿಸುತ್ತಾರೆ. ಈ ಬಗ್ಗೆ ನಮ್ಮ ಎಸ್ಟಿಮೇಟ್ ಕಮಿಟಿಯವರು ಪ್ರತಿಭಟಿಸಿಲ್ಲವೇ ? ಕೇಂದ್ರಸರ್ಕಾರದವರು ಏಕೆ ಈ ರೀತಿ ಬಡ್ಡಿಯಲ್ಲೂ ಕೂಡ ಮಾರ್ವಾಡಿಯವರ ತರಹ ಮಾಡುತ್ತಾರೆಂದು ನೀವು ಪ್ರತಿಭಟಿಸಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಕೇಂದ್ರಸರ್ಕಾರಕ್ಕೆ ಸಹಾಯ ಸಿಗುತ್ತದೆ, ಇದನ್ನು ವಿತರಣೆ ಮಾಡುವುದರಲ್ಲಿ ಕೇಂದ್ರಸರ್ಕಾರವು ತನ್ನದೇ ಆದ ನೀತಿಯನ್ನು ಹಾಕಿಕೊಂಡಿದೆ. ಈ ನೀತಿಯನ್ನು ನಿರೂಪಣೆ ಮಾಡುವಾಗ ರಾಜ್ಯಸರ್ಕಾರಗಳ ಸಲಹೆಗಳನ್ನು ಎಂದೂ ಕೇಳಿಲ್ಲ. ಆ ನೀತಿ ಏನೆಂದರೆ, ಅಂತರ ರಾಷ್ಟ್ರೀಯ ಹಣಕಾಸಿನ ಸಂಸ್ಥೆಗಳಾದ, ಅದು ವರ್ಲ್ಡ್ ಬ್ಯಾಂಕ್ ಇರಲಿ ಅಥವಾ ಬೇರೆ ಯಾವುದೇ ಹಣಕಾಸಿನ ಸಂಸ್ಥೆ ಇರಲಿ, ಬೇರೆ ಬೇರೆ ಪರ್ಸೆಂಟ್ ಬಡ್ಡಿ ಮೇಲೆ ಕೇಂದ್ರಸರ್ಕಾರಕ್ಕೆ ಸಾಲವನ್ನು ಕೊಡುತ್ತಾರೆ. ಅದು ಮುಕ್ಕಾಲು ಪರ್ಸೆಂಟ್ ಇರಬಹುದು, ೨ ಪರ್ಸೆಂಟ್ ಇರಬಹುದು. ಒಟ್ಟಿನಲ್ಲಿ ೪ ಪರ್ಸೆಂಟ್‌ಗಿಂತ ಕಡಿಮೆ ಇರುತ್ತದೆ. ಇದರಲ್ಲಿ ಕೇಂದ್ರ ಸರ್ಕಾರದವರು ಏನು ಮಾಡುತ್ತಾರೆಂದು ಹೇಳಿದರೆ, ಈ ಸಹಾಯ ಅಂದರೆ ಸಾಲದ ಸಹಾಯ ಒಂದು ನಿರ್ದಿಷ್ಟವಾದ ಯೋಜನೆಗೆ ಸಂಬಂಧಪಡದೇ ಇದ್ದರೂ ಕೂಡ ಕೇಂದ್ರಸರ್ಕಾರದವರು ಈ ಎಲ್ಲಾ ಹಣವನ್ನೂ ತನ್ನ ನಿಧಿಯಲ್ಲಿ ಸೇರಿಸಿ ಕೊಳ್ಳುತ್ತಾರೆ. ಮತ್ತು ಈ ಹಣವನ್ನು ರಾಜ್ಯ ಸರ್ಕಾರಕ್ಕೆ ಕೊಡುವಾಗ ಅದರಲ್ಲಿ ೩೦ ಪರ್ಸೆಂಟನ್ನು ಗ್ರಾಂಟ್ ರೂಪವಾಗಿಯೂ, ೭೦ ಪರ್ಸೆಂಟನ್ನು ಸಾಲದ

ರೂಪವಾಗಿಯೂ ನಮಗೆ ಕೊಡುತ್ತಾರೆ. ಮತ್ತು ಅದಕ್ಕೆ ಅವರು ವಿಧಿಸತಕ್ಕಂಥ ಬಡ್ಡಿಯದರ ಪ್ರತಿಶತ ಒಂಬತ್ತೂಕಾಲು ಪರ್ಸೆಂಟ . ಈಗ ಇದರಲ್ಲಿ ರಾಜ್ಯ ಸರಕಾರಕ್ಕೆ ಎಷ್ಟರಮಟ್ಟಿಗೆ ಅನ್ಯಾಯವಾಗುತ್ತದೆ ಎಂದು ಹೇಳುವುದರ ಬಗ್ಗೆ ಅನೇಕ ಸಲ ಅನೇಕ ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಆದರೆ ಕೇಂದ್ರ ಸರ್ಕಾರದವರು ತಮ್ಮ ನೀತಿಯನ್ನು ಬದಲಾಯಿಸಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.-- ಅಧ್ಯಕ್ಷರೇ, ನಮಗೆ ವರ್ಲ್ಡ್ ಬ್ಯಾಂಕ್‌ನಿಂದಾಗಲೀ ಇಂಟರ್ ನ್ಯಾಷನಲ್ ಡೆವೆಲಪ್‌ಮೆಂಟ್ ಏಜೆನ್ಸಿಯಿಂದಾಗಲೀ ನಮಗೆ ಲೋನ್ ಸ್ಯಾಂಕ್ಷನ್ ಆದರೆ ಅದರಲ್ಲಿ ಕೇಂದ್ರ ಸರಕಾರದವರು ೭೦ ಪರ್ಸೆಂಟ್ ಮಾತ್ರ ನಮಗೆ ಕೊಡುತ್ತಾರೆ. ನಮಗೆ ಬಂದ ಲೋನ್‌ನಲ್ಲಿ ೩೦ ಪರ್ಸೆಂಟ್ ಅವರು ಯೂಟಿಲೈಸ್ ಮಾಡಿಕೊಳ್ಳುತ್ತಾರೆ. ಈ ರೀತಿ ಮಾಡುವುದು ಅನ್ಯಾಯ ಎಂದು ಏತಕ್ಕೆ ಪ್ರೊಟೆಸ್ಟ್ ಮಾಡಲಿಲ್ಲ ? ಅನುಬಂಧ ಒಂದರಲ್ಲಿ ೧೨ ಮತ್ತು ಅನುಬಂಧ ಎರಡರಲ್ಲಿ ೧೨ ಯೋಜನೆಗಳನ್ನು ಕೊಟ್ಟಿದ್ದೀರಿ. ಅನುಬಂಧ ಎರಡರಲ್ಲಿ ಇರುವ ೧೨ ಯೋಜನೆಗಳನ್ನು ವರ್ಲ್ಡ್ ಬ್ಯಾಂಕ್ ಒಪ್ಪಿಕೊಂಡಿದೆ ಎಂದು ಹೇಳಿದ್ದೀರಿ ಹಾಗೂ ಅನುಬಂಧ ಒಂದರಲ್ಲಿ ಕೊಟ್ಟಿರುವ ೧೨ ಯೋಜನೆಗಳನ್ನು ಪೂರ್ತಿ ಮಾಡಿದ್ದೀರಿ. ಹೊಸದಾಗಿ ಸ್ಕೀಮ್ ಇಂಟ್ರಡ್ಯೂಸ್ ಮಾಡಿರುವುದು ಇನ್ನೂ ೧೨ ಪ್ರಾಜೆಕ್ಟ್ ಇದೆ. ಇದರಲ್ಲಿ ಕಾವೇರಿ ಮೂರನೇ ಹಂತದ ಯೋಜನೆಯನ್ನೂ ಸಹ ಸೇರಿಸಬೇಕಾಗಿತ್ತು. ಇದಕ್ಕೆ ೧೪೦ ಕೋಟಿ ರೂಪಾಯಿಗಳನ್ನು ಗ್ಯಾರಂಟಿ ಮಾಡಿದ್ದಾರೆ ಎಂದು ನನಗೆ ಗೊತ್ತಾಗಿದೆ, ಆದರೆ ಇದನ್ನು ಏತಕ್ಕೆ ಇದರಲ್ಲಿ ಸೇರಿಸಿಲ್ಲ ? ಈ ಯೋಜನೆಗಳನ್ನು ಏತಕ್ಕೆ ಬೇಗ ಇಂಪ್ಲಿಮೆಂಟ್ ಮಾಡಿಕೊಟ್ಟಿರುವ ಏಡ್‌ನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದಿಲ್ಲ ಎಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಆಗಲೇ ಮುಖ್ಯವಾದ ಉತ್ತರದಲ್ಲಿ ಹೇಳಿದೆ, ಕಾವೇರಿ ಪ್ರಾಜೆಕ್ಟನ್ನು ನಾವು ಇದರಲ್ಲಿ ಸೇರಿಸಿಲ್ಲ. ವರ್ಲ್ಡ್ ಬ್ಯಾಂಕ್‌ನವರು ಯಾವ ಒಂದು ಕಟ್ಟಳೆಯನ್ನು, ಕಂಡೀಷನ್‌ನ್ನು ಹಾಕಿದ್ದಾರೆ, ಆ ಕಂಡೀಷನ್ ನಮಗೆ ಸಹಕಾರಿ ಅಲ್ಲ ಎಂದು ಹೇಳುವ ಕಾರಣದಿಂದ ಅದನ್ನು ನಾವು ಒಪ್ಪಿಕೊಳ್ಳಲಿಲ್ಲ. ಅದನ್ನು ನಮ್ಮದೇ ಆದಂಥ ಹಣದಿಂದ ಎಲ್.ಐ.ಸಿ, ಹಣದಿಂದ ಅದಕ್ಕೆ ಫೈನಾನ್ಸ್ ಮಾಡುತ್ತೇವೆ. ಅನುಬಂಧ ಒಂದರಲ್ಲಿರತಕ್ಕಂಥ ಪ್ರಾಜೆಕ್ಟ್‌ಸ್ ಇಂಪ್ಲಿಮೆಂಟೇಷನ್‌ನ ಬೇರೆ ಬೇರೆ ಹಂತದಲ್ಲಿವೆ.

ಶ್ರೀ ಆರ್. ವೆಂಕಟರಾಮಯ್ಯ.—ಅನುಬಂಧ ಒಂದರಲ್ಲಿ ಇರತಕ್ಕ ಪ್ರಾಜೆಕ್ಟ್‌ನ್ನು ಯಾವಾಗ ತೆಗೆದುಕೊಳ್ಳುತ್ತೀರಿ ? ಇದು ಬಹಳ ನಿಧಾನವಾಗಿದೆ. ಸಿರಿಕಲ್ಚರ್ ಪ್ರಾಜೆಕ್ಟ್ ಇದೆ, ಟ್ಯಾಂಕ್ ಇರಿಗೇಷನ್ ಪ್ರಾಜೆಕ್ಟ್ ಇದೆ, ಮಲ್ಟಿಪರ್ಪಸ್ ಕಲ್ಚರ್ಸ್ ಪ್ರಾಜೆಕ್ಟ್ ಇದೆ, ಇರಿಗೇಷನ್ ಪ್ರಾಜೆಕ್ಟ್ ಇದೆ, ಪಾಪ್ಯುಲೇಷನ್ ಪ್ರಾಜೆಕ್ಟ್ ಇದೆ, ವಾಟರ್‌ಷೆಡ್ ಪ್ರಾಜೆಕ್ಟ್ ಇದೆ, ಈ ರೀತಿಯಾಗಿ ಒಳ್ಳೊಳ್ಳೆಯ ಪ್ರಾಜೆಕ್ಟ್‌ಸ್ ಇವೆ. ನ್ಯಾಷನಲ್ ಸೀಡ್ ಪ್ರಾಜೆಕ್ಟ್ ಏನು ಇದೆ ಇದನ್ನು ಯಾವಾಗ ತೆಗೆದುಕೊಳ್ಳುತ್ತೀರಿ ? ಇದನ್ನು ತೆಗೆದುಕೊಳ್ಳಲು ಏತಕ್ಕೆ ನಿಧಾನ ಮಾಡುತ್ತಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ನಿಧಾನ ಆಗುತ್ತಿಲ್ಲ. ವರ್ಲ್ಡ್ ಬ್ಯಾಂಕ್‌ನಿಂದ ನಾವು ಯಾವುದೇ ನೆರವನ್ನು, ಯಾವುದೇ ರೀತಿಯ ಸಹಾಯವನ್ನು ಪಡೆದರೂ ಕೂಡಾ ಅದಕ್ಕೆ ಕೆಲವು ಸಮಯದ ಅಗತ್ಯ ಇದೆ. ಕೆಲವು ಸಮಯವನ್ನು ಅಗತ್ಯವಾಗಿ ಇದಕ್ಕೆ ತೆಗೆದಿಡಲೇ ಬೇಕಾಗುತ್ತದೆ. ಪತ್ರವ್ಯವಹಾರ ಮಾಡಬೇಕು ಅವರ ಜೊತೆಗೆ ಚರ್ಚೆ ಮಾಡಬೇಕು, ಮತ್ತೊಂದು ಮಗದೊಂದು ಇದನ್ನೆಲ್ಲಾ ಮಾಡುವುದಕ್ಕೆ ಸಮಯ ಬೇಕಾಗುತ್ತದೆ, ಇದನ್ನು ಮಾಡುತ್ತಿದ್ದೇನೆ. ಆದುದರಿಂದ ರಾಜ್ಯ ಸರಕಾರದ ವತಿಯಿಂದ ಯಾವ ರೀತಿಯ ವಿಳಂಬವೂ ಆಗಿಲ್ಲ. ಆದಷ್ಟು ಬೇಗ ಇವುಗಳನ್ನು ಕಾರ್ಯಗತ ಮಾಡುತ್ತೇವೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಅಧ್ಯಕ್ಷರೇ, ಜಾಗತಿಕ ಬ್ಯಾಂಕ್ ಅಥವಾ ಇನ್ನಿತರ ಸಂಸ್ಥೆಗಳಿಂ ಯಾವ ಬಡ್ಡಿದರದಲ್ಲಿ ಸಾಲವನ್ನು ಕೊಡುತ್ತವೆ ಅದೇ ಬಡ್ಡಿದರವನ್ನು ರಾಜ್ಯ ಸರಕಾರಗಳಿಂದ ತೆಗೆದು ಕೊಳ್ಳುವುದಕ್ಕೆ ಕೇಂದ್ರಸರಕಾರದ ಮೇಲೆ ಪ್ರಭಾವಯುತವಾಗಿ ಒತ್ತಾಯ ಮಾಡುವುದಕ್ಕೆ, ಎನ್.ಡಿ.ಸಿ. ಮೀಟಿಂಗ್‌ನಲ್ಲಾಗಲೀ, ಮುಖ್ಯಮಂತ್ರಿಗಳ ಸಭೆಯಲ್ಲಾಗಲೀ, ಮುಖ್ಯಮಂತ್ರಿಗಳಿಂ ಅಥವಾ ರಾಜ್ಯ ಸರಕಾರದ ಅಧಿಕಾರಿಗಳು ತಮ್ಮ ಬೇಡಿಕೆಯನ್ನು ಇಟ್ಟಿದ್ದಾರೆಯೇ ಹಾಗೂ ಅದಕ್ಕೆ ಯಾವ ರೀತಿ ಉತ್ತರ ಬಂದಿದೆ ಎಂಬುದನ್ನು ಹೇಳಬೇಕು. ಇನ್ನು ಕೇಂದ್ರ ಸರಕಾರದವರು ಇದರಲ್ಲಿ ೧೦ ಪರ್ಸೆಂಟ್ ಹಣ ಇಟ್ಟುಕೊಳ್ಳುವುದು ಯಾವ ಕಾರಣಕ್ಕಾಗಿ ? ಜ್ಯಾಂಕ್‌ನವರು ಕಮಿಷನ್ ತೆಗೆದುಕೊಂಡಹಾಗೆ.

ಫೈನಾನ್ಸ್ ಕಾರ್ಪೊರೇಷನ್‌ನವರು, ಮೂರವಾಡಿಗಳು ಕಮಿಷನ್ ತೆಗೆದುಕೊಳ್ಳುವ ರೀತಿಯಲ್ಲಿ ಅವರು ಮಾಡಬಾರದು. ಈ ಬಗ್ಗೆ ಕೇಂದ್ರ ಸರಕಾರದ ಜೊತೆಗೆ ಪತ್ರ ವ್ಯವಹಾರ ಮಾಡಲಾಗಿದೆಯೇ ? ಎನ್.ಡಿ.ಸಿ. ಮೀಟಿಂಗ್‌ನಲ್ಲಾಗಲೀ, ಮುಖ್ಯಮಂತ್ರಿಗಳ ಸಭೆಯಲ್ಲಾಗಲೀ, ಈ ದೇಶದ ಎಲ್ಲಾ ರಾಜ್ಯಗಳ ಆರ್ಥಿಕ ಪರಿಸ್ಥಿತಿಯ ದೃಷ್ಟಿಕೋನ ಇಟ್ಟುಕೊಂಡು ಇದನ್ನು ಸುಧಾರಿಸಲಿಕ್ಕೆ ಸಹಕಾರಿಯಾಗುವಂತಹ ರೀತಿಯಲ್ಲಿ ಪರಿಣಾಮಕಾರಿಯಾದ ರೀತಿಯಲ್ಲಿ ಚರ್ಚಿಸಿ, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಕೇಂದ್ರ ಸರಕಾರಕ್ಕೆ ಯಾವ ಬಡ್ಡಿದರದಲ್ಲಿ ಸಾಲ ಕೊಡುತ್ತಾರೆ ಅದೇ ಬಡ್ಡಿದರವನ್ನು ರಾಜ್ಯಸರಕಾರಗಳಿಗೂ ಹಾಕಿದರೆ ಸಹಕಾರಿಯಾಗುತ್ತದೆ ಎಂದು ಹೇಳಬೇಕು.

೧೧–೩೦ ಎ.ಎಂ.

ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ವಿವರವಾಗಿ ಉತ್ತರ ಕೊಡಬೇಕು. ಕರ್ನಾಟಕದ ಎಸ್ಟಿ ಮೇಟ್ ಕಮಿಟಿಯವರು ದೇಶದಲ್ಲಿಯೇ ಪ್ರಥಮ ಭಾರಿಗೆ ಕೇಂದ್ರ ಸರ್ಕಾರದ ಪಾರ್ಲಿಮೆಂಟರಿ ಎಸ್ಟಿಮೇಟ್ಸ್ ಕಮಿಟಿ ಜೊತೆ ಪತ್ರವ್ಯವಹಾರ ನಡೆಸಿದರೂ ದುರ್ದೈವವಶಾತ್ ಅವರು ನಮಗೆ ಇದುವರೆವಿಗೂ ನಮ್ಮ ಪತ್ರಕ್ಕೆ ಉತ್ತರವೇ ಬರೆಯಲಿಲ್ಲ. ಎರಡು ಮೂರು ಸಾರಿ ಪತ್ರ ವ್ಯವಹಾರ ನಡೆಸಿದ್ದೇವೆ. ಈ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಿ ತಮ್ಮ ಪ್ರಭಾವವನ್ನು ಅವರ ಮೇಲೆ ಬೀರಿ ಯಾವ ರೀತಿಯಿಂದಲಾದರೂ ಅನುಕೂಲ ಮಾಡಿ ಕೊಡಬೇಕು ಮತ್ತು ನನ್ನ ಪ್ರಶ್ನೆಗೆ ವಿವರವಾದ ಉತ್ತರ ಕೊಡಬೇಕೆಂದು ಕೋರುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಮಂಡಲಿಯಲ್ಲಿ ಸಹ ಈ ವಿಷಯವನ್ನು ನಾವು ಅಂದರೆ ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳು ಎತ್ತಿದ್ದೇವೆ ಮತ್ತು ಫೈನಾನ್ಸ್ ಕಮಿಷನ್ ಜೊತೆಗೆ ಚರ್ಚೆ ಮಾಡುವಾಗ ಸಹ ಈ ವಿಷಯವನ್ನು ಎತ್ತಿದ್ದೇವೆ. ಈಗೆ ಅವರಿಗೆ ಅಂತರರಾಷ್ಟ್ರೀಯ ಹಣ ಸಹಾಯ ಏನು ಬರುತ್ತದೆ ಅದರಲ್ಲಿ ಅವರು ಸಾಲದ ರೂಪವಾಗಿ ಶೇಕಡ ೭೦ ಪರ್ಸೆಂಟ್‌ನು ಕೊಡುತ್ತಾರೆ ಇನ್ನು ೩೦ ಪರ್ಸೆಂಟ್ ಗ್ರಾಂಟ್ ಅನ್ನು ರಾಜ್ಯ ಸರ್ಕಾರಗಳಿಗೆ ಕೊಡುತ್ತಾರೆ. ಈ ಸಾಲದ ಮೇಲೆ ಅವರು ಬಡ್ಡಿಯನ್ನು ಹೆಚ್ಚು ಅನುಕರಣೆ ಮಾಡಿದ್ದಾರೆ. ಈ ಬಗ್ಗೆ ಅವರಲ್ಲಿ ವಾದ ಸಹ ಮಾಡಿದ್ದೇವೆ. ಬಹುಶಃ ಈ ಬಗ್ಗೆ ಫೈನಾನ್ಸ್ ಕಮಿಷನ್‌ರವರು ಬೇರೆ ನಿಲುವನ್ನು ಈ ಸಾರಿ ತೆಗೆದುಕೊಳ್ಳಬಹುದೆಂದು ನಾನು ಆಸೆ ಮಾಡುತ್ತೇನೆ. ಮಾನ್ಯ ಸದಸ್ಯರ ಸೂಚನೆ ಏನಿದೆ, ಅದು ಸ್ವಾಗತಾರ್ಹವಾದುದು

ಸೇಂದಿ ಕಲಬೆರಕೆ ಮಾಡಿರುವ ಗುತ್ತಿಗೆದಾರರು

೧೩೮೪. ಶ್ರೀ ಗೋಪಾಲ ಮುಕುಂದ ಕಾನಡೆ (ಸಿಸಿ).—ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬–೮೭, ೧೯೮೭–೮೮ರ ಸೇಂದಿ ಕಲಬೆರಕೆ ಮಾಡಿರುವ ಗುತ್ತಿಗೆದಾರರುಗಳ ಹೆಸರುಗಳೇನು ? ಹಾಗೂ ವಿಳಾಸ ಒದಗಿಸುವುದು;

ಆ) ಹಾಗಿದ್ದಲ್ಲಿ ಅಂತಹವರ ಮೇಲೆ ಸರ್ಕಾರವು ಗಮನ ಹರಿಸಿ ಕೈಗೊಂಡ ಕ್ರಮವೇನು ?

ಇ) ಸೇಂದಿ ಗುತ್ತಿಗೆದಾರರಿಂದ ವರ್ಷಕ್ಕೆ ಬರುವ ಆದಾಯವೆಷ್ಟು ?

ಶ್ರೀ ಡಿ.ಬಿ. ಇನಾಂದಾರ್ (ಅಬಕಾರಿ ಮಂತ್ರಿಗಳು).—

ಅ) ೧೯೮೬–೮೭ ಮತ್ತು ೧೯೮೭–೮೮ನೇ ಸಾಲಿನಲ್ಲಿ ಸೇಂದಿ ಕಲಬೆರಕೆಗೆ ಮೊಕದ್ದಮೆಗಳನ್ನು ಹೂಡಿರುವ ಪಟ್ಟಿಯನ್ನು ಲಗತ್ತಿಸಿದೆ.

ಆ) ಈ ಮೊಕದ್ದಮೆಗಳಲ್ಲಿ ಪ್ರಥಮ ಮಾಹಿತಿಯ ವರದಿಯನ್ನು ಸಲ್ಲಿಸಲಾಗಿದೆ ಮತ್ತು ಪ್ರಕರಣಗಳನ್ನು ತನಿಖೆ ಮಾಡಲಾಗುತ್ತಿದೆ ಕೆಲವೊಂದು ಪ್ರಕರಣಗಳಲ್ಲಿ ಆರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

ಇ) ೧೯೮೭–೮೮ರ ಸಾಲಿನ ಅಂದಾಜು ಮಾಡಲಾದ ಆದಾಯ ೫೭ ಕೋಟಿ ರೂಪಾಯಿಗಳು.